CAREERINDIA

| Roll No. | | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 54 ]
Total No. of Questions : 54 ]

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24
[ Total No. of Printed Pages : 24

ಸಂಕೇತ ಸಂಖ್ಯೆ : **33-K**

**Code No. : 33-K**

# ವಿಷಯ : ದ್ವಿತೀಯ ಭಾಷೆ — ಕನ್ನಡ

# Subject : Second Language — KANNADA

ದಿನಾಂಕ : 21. 06. 2012 ]
ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-15 ರವರೆಗೆ ]
ಪರಮಾವಧಿ ಅಂಕಗಳು : 100 ]

[ Date : 21. 06. 2012
[ Time : 9-30 A.M. to 12-15 P.M
[ Max. Marks : 100

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 12. | | 23. | | 34. | | 45. | |
| 2. | | 13. | | 24. | | 35. | | 46. | |
| 3. | | 14. | | 25. | | 36. | | 47. | |
| 4. | | 15. | | 26. | | 37. | | 48. | |
| 5. | | 16. | | 27. | | 38. | | 49. | |
| 6. | | 17. | | 28. | | 39. | | 50. | |
| 7. | | 18. | | 29. | | 40. | | 51. | |
| 8. | | 19. | | 30. | | 41. | | 52. | |
| 9. | | 20. | | 31. | | 42. | | 53. | |
| 10. | | 21. | | 32. | | 43. | | 54. | |
| 11. | | 22. | | 33. | | 44. | | × | |
| | | | | | | | | ***Total Marks*** | |
| **Total Marks in words** | | | | | | | | **Grand Total** | |

| | | | |
|---|---|---|---|
| 1. ✓ | | ✓ | ✓ |
| 2. ✓ | | | |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

www.careerindia.com

CAREERINDIA



*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 54 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಿ, ಅರ್ಥೈಸಿಕೊಳ್ಳಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ : $15 \times 1 = 15$

1. ಆ ದೇಶ ಯಾವುದು – ಈ ವಾಕ್ಯದ ಕೊನೆಯಲ್ಲಿರಬೇಕಾದ ಲೇಖನ ಚಿಹ್ನೆ

   (ಎ) ಉದ್ಧರಣ  (ಬಿ) ಆಶ್ಚರ್ಯ ಸೂಚಕ

   (ಸಿ) ಪ್ರಶ್ನಾರ್ಥಕ  (ಡಿ) ಅಲ್ಪವಿರಾಮ

   ಉತ್ತರ : ____________________

2. ಕ್ರಿಯಾಪದದ ಮೂಲ ರೂಪ

   (ಎ) ಕೃದಂತ  (ಬಿ) ಧಾತು

   (ಸಿ) ಸರ್ವನಾಮ  (ಡಿ) ಕ್ರಿಯಾ ವಿಶೇಷಣ

   ಉತ್ತರ : ____________________



www.careerindia.com

3. 'ಶಿಖರಗಳು' ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ

(ಎ) ಅ (ಬಿ) ಉ

(ಸಿ) ಅನ್ನು (ಡಿ) ಇಂದ

ಉತ್ತರ : ______________________

4. 'ಆಗಮನ' ಈ ಪದದ ವಿರುದ್ಧಾರ್ಥಕ ರೂಪ

(ಎ) ಆಗಮನೆ (ಬಿ) ನಿರುಗಮನ

(ಸಿ) ನಿಗುಮನ (ಡಿ) ನಿರ್ಗಮನ

ಉತ್ತರ : ______________________

5. 'ಕುಂಟ' ಇದು ಈ ನಾಮಪದಕ್ಕೆ ಉದಾಹರಣೆ

(ಎ) ರೂಢನಾಮ (ಬಿ) ಅಂಕಿತನಾಮ

(ಸಿ) ಅನ್ವರ್ಥನಾಮ (ಡಿ) ಭಾವನಾಮ

ಉತ್ತರ : ______________________

6. ಈ ಪದಗಳಲ್ಲಿರುವ ಅನ್ಯದೇಶೀಯ ಪದ ಯಾವುದು ?

(ಎ) ಮಧುರ (ಬಿ) ರೈನ್‌ಸೆಂಟರ್

(ಸಿ) ಸುಂದರ (ಡಿ) ಆಹಾರ

ಉತ್ತರ : ______________________

7. 'ಅವ್ವೆ' ಪದದ ಗ್ರಾಂಥಿಕ ರೂಪ

(ಎ) ಅವಳೆ (ಬಿ) ಅವ್ವೆ

(ಸಿ) ಅವಳು (ಡಿ) ಅಮ್ಮ

ಉತ್ತರ : ______________________



www.careerindia.com

CAREERINDIA



8. 'ಪುಸ್ತಕ' ಇದರ ತದ್ಭವ ರೂಪ

(ಎ) ಗ್ರಂಥ (ಬಿ) ಹೊತ್ತಿಗೆ

(ಸಿ) ಭಂಡಾರ (ಡಿ) ಹುತ್ತಿಗೆ

ಉತ್ತರ : ______

9. 'ನಾಯಕ' ಇದರ ಅನ್ಯಲಿಂಗ ಪದ ಯಾವುದು ?

(ಎ) ನಯಕ (ಬಿ) ನಯಾಕಾ

(ಸಿ) ನಾಯಕಿ (ಡಿ) ನಾನಕ

ಉತ್ತರ : ______

10. 'ಮಳೆಗಾಲ' ಇದು ಯಾವ ಸಂಧಿಗೆ ಉದಾಹರಣೆ ?

(ಎ) ಆಗಮ (ಬಿ) ಲೋಪ

(ಸಿ) ವೃದ್ಧಿ (ಡಿ) ಆದೇಶ

ಉತ್ತರ : ______

11. 'ಸುತ' ಪದದ ಸಮಾನಾರ್ಥಕ ರೂಪ

(ಎ) ಮಗಳು (ಬಿ) ಸತಿ

(ಸಿ) ಪತಿ (ಡಿ) ಮಗ

ಉತ್ತರ : ______

12. 'ಬೇವಿನ ಹಳ್ಳ' ಇಲ್ಲಿರುವ ಅಲಂಕಾರ ಯಾವುದು ?

(ಎ) ರೂಪಕ (ಬಿ) ಯಮಕ

(ಸಿ) ಉಪಮಾ (ಡಿ) ಉತ್ಪ್ರೇಕ್ಷಾ

ಉತ್ತರ : ______

www.careerindia.com

CAREERINDIA



13. ಕೆಳಗಿನ ಪದಗಳಲ್ಲಿ ಶುದ್ಧರೂಪ

(ಎ) ಬಾಗ್ಯ (ಬಿ) ಭಾಗ್ಯ

(ಸಿ) ಬಾಗ್ಯಾ (ಡಿ) ಬಗ್ಯಾ

ಉತ್ತರ : ____________________

14. ಪದ್ಯರಚನಾ ನಿಯಮವನ್ನು ತಿಳಿಸುವ ಶಾಸ್ತ್ರ

(ಎ) ಛಂದಶ್ಶಾಸ್ತ್ರ (ಬಿ) ಅಲಂಕಾರ

(ಸಿ) ಪದ್ಯಶಾಸ್ತ್ರ (ಡಿ) ರೂಪಕ

ಉತ್ತರ : ____________________

15. ಸರ್ವನಾಮ ಪದಕ್ಕೆ ಉದಾಹರಣೆ

(ಎ) ದೆವ್ವ (ಬಿ) ಅವು

(ಸಿ) ಹಾವು (ಡಿ) ಕಾವು

ಉತ್ತರ : ____________________

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : 5 × 1 = 5

16. ಸೂರ್ಯ ........................................ ಸಣ್ಣಗಾಗಿ ಹೋಗಿದ್ದ.

17. 'ದಪ್ಪ' ಅನ್ನೋದಕ್ಕೆ ಧಾರವಾಡದ ಕಡೆ ........................................ ಎಂದು ಕರೆಯುತ್ತಾರೆ.

18. ಅಚ್ಚಕೆಂಪಿನ ಬಳೆ ........................................ ಗೀರಿನ ಬಳೆ.

19. ಕೆಂಪೇಗೌಡರ ಗೋಪುರ ಅತ್ಯಂತ ........................................ ವಾದದ್ದು.

20. ಭರತ ಭೂತಳಕ್ಕೆ ಸಿಂಗಾರವಾದುದ್ದು ........................................



www.careerindia.com

CAREERINDIA



21. 'ಅ' ಪಟ್ಟಿಯಲ್ಲಿನ ವ್ಯಾಕರಣಾಂಶಗಳಿಗೆ ಸರಿಹೊಂದುವ ಪದಗಳನ್ನು 'ಬ' ಪಟ್ಟಿಯಿಂದ ಆರಿಸಿ, ಹೊಂದಿಸಿ ಬರೆಯಿರಿ : $5 \times 1 = 5$

| ಅ | | ಬ | |
|---|---|---|---|
| i) | ಅನುಕರಣಾವ್ಯಯ | ಅ) | ಮಗು |
| ii) | ಬಹುವಚನ | ಆ) | ಮನೆಯಲ್ಲಿ |
| iii) | ಸಪ್ತಮೀ ವಿಭಕ್ತಿ | ಇ) | ಮೊನ್ನೆ ಮೊನ್ನೆ |
| iv) | ದ್ವಿರುಕ್ತಿ | ಈ) | ರಾಜ |
| v) | ತತ್ಸಮ | ಉ) | ದೀನದಲಿತ |
| | | ಊ) | ರಾಮರಿಗೆ |
| | | ಋ) | ಜುಳುಜುಳು |
| | | ಎ) | ಮಕ್ಕಳು |

*ಉತ್ತರಗಳು :* i) ____________________

ii) ____________________

iii) ____________________

iv) ____________________

v) ____________________

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ : $8 \times 1 = 8$

22. ಲಕ್ಷಣಿಗೆಯಿಂದ ಲಟ್ಟಿಸುವಾಗ ಕೇಳಿಸುವ ಶಬ್ದವೇನು ?

____________________

____________________

23. ಗಾಂಧೀಜಿಯವರು ಯಾವುದರ ಸೂತ್ರಧಾರರಾಗಿದ್ದರು ?

____________________

____________________



www.careerindia.com

24. ಯಾರ ಬಳಿಯಲ್ಲಿ ಕಾರಂತರು ಶಿಷ್ಯವೃತ್ತಿ ಗಿಟ್ಟಿಸಿದರು ?

25. ಹಡೆದವ್ವನ ಆಸೆ ಏನು ?

26. ತಗಡೂರು ರಾಮಚಂದ್ರರಾಯರು ಕೈಗಾಡಿಯಲ್ಲಿ ಏನನ್ನು ಮಾರುತ್ತಿದ್ದರು ?

27. 'ದರ್ಶನ' ಪದ್ಯದಲ್ಲಿ ಆ ಹಿರಿಯರು ಕವಿಗಳನ್ನು ಎಲ್ಲಿಗೆ ಆಹ್ವಾನಿಸಿದರು ?

28. ಲಾಲ್‌ಬಾಗ್ ಗಾಜಿನಮನೆ ಯಾವುದರ ಪುನರುತ್ಥಾನವಾಗಿದೆ ?

29. ಭರತ ಚಕ್ರೇಶ್ವರನ ತಂದೆಯ ಹೆಸರೇನು ?

www.careerindia.com

ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $12 \times 2 = 24$

30. ಪೂರ್ಣಿಮಾಳ ಗಂಡನ ಬೆನ್ನು ನೀಲಿಗಟ್ಟಿದ್ದು ಏಕೆ ?

31. ಗಾಂಧೀಜಿಯವರನ್ನು 'ಹಿರಿಯ ತಂದೆ' ಎಂದು ಏಕೆ ಕರೆಯಲಾಗಿದೆ ?

www.careerindia.com

CAREERINDIA



32. ಪಂಚ ಪರ್ವತಗಳು ಎಲ್ಲಿವೆ ? ಅವು ಯಾವುವು ?

33. ಬಳೆಗಾರನಿಗೆ ಹಡೆದವ್ವನ ಮನೆಯ ಗುರುತುಗಳು ಬಾಲೆ ಯಾವ ಮಾತುಗಳಲ್ಲಿ ಹೇಳಿದಳು ?

www.careerindia.com

CAREERINDIA



34. ತಗಡೂರು ರಾಮಚಂದ್ರರಾಯರು ಮಾಡಿದ ಎರಡು ಮುಖ್ಯ ಕಾರ್ಯಗಳು ಯಾವುವು ?

35. ಧ್ಯಾನವೆಂಬ ಅಗ್ನಿಯು ಏನನ್ನು ದಹಿಸಿ ನಿವಾರಿಸುವುದು ?

www.careerindia.com

CAREERINDIA



36. ಮರಿಗೌಡರ ಕಳಕಳಿ ಮತ್ತು ಹೇರಾಸೆ ಏನು ?

37. ಚೇಳಿನ ಆಕಾರಕ್ಕಂಜುವರು – ಈ ಮಾತಿನ ಹಿನ್ನೆಲೆಯನ್ನು ತಿಳಿಸಿ.

www.careerindia.com

38. ಮಳೆನೀರು ಭೂಮಿಯೊಳಕ್ಕೆ ಇಳಿಯುವುದು ಕಡಿಮೆಯಾಗುತ್ತಿದೆ. ಏಕೆ ?

39. 'ದರ್ಶನ' ಪದ್ಯದಲ್ಲಿ ಕಪಿಯನ್ನು ನೋಡಿದ ಹಿರಿಯರಲ್ಲಾದ ಬದಲಾವಣೆಗಳಾವುವು ?



www.careerindia.com

CAREERINDIA



40. ಮಳೆ ಕೊಯ್ಲಿನ ಕ್ರಮಗಳಾವುವು ?

41. ಭರತ ಚಕ್ರೇಶ್ವರನು ಹೇಗೆ ಸುಖವಾಗಿ ಬಾಳುತ್ತಿದ್ದನು ?

www.careerindia.com

CAREERINDIA



ಈ ಕೆಳಗೆ ಕೊಟ್ಟಿರುವ ಸಾಹಿತಿಗಳ ಸ್ಥಳ, ಕಾಲ, ಕೃತಿಗಳನ್ನು ಕುರಿತು ಬರೆಯಿರಿ : 2 × 2 = 4

42. ಶ್ರೀ ಎಚ್.ಎಸ್. ವೆಂಕಟೇಶಮೂರ್ತಿ

43. ಶ್ರೀಮತಿ ಲೀಲಾವತಿ ಎಸ್. ರಾವ್

44. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : 2 × 1 = 2

ಪಂಪ ಮಹಾಚಲ ಜೋಡಿ ಶಿಖರಗಳು

ಧುಮ್ಮಿಕ್ಕುವ ಹರಿಹರನ ಝರಿ.

ಅಥವಾ

ಕಾಲನ ದೂತರು ಕಾಲ್ಪಿಡಿದೆಳೆದಾಗ

ಸುಳ್ಳು ಸಂಸಾರ ಸುಳಿಗೆ ಸಿಕ್ಕಲು ಬೇಡ.



www.careerindia.com

ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭ ಸಹಿತ ಮೂರು-ನಾಲ್ಕು ವಾಕ್ಯಗಳಲ್ಲಿ ವಿವರಿಸಿ : 4 × 3 = 12

45. "ಬರಲಿಲ್ಲವೇ ನಿನ್ನ ತಾಯಿ."

46. "ತುಂಬಲಿಲ್ಲವೆ ಬಡವರ ಬಸಿರು."

www.careerindia.com

47. “ತಾನು ಏನು ಅಲ್ವೋ ಅದನ್ನು ಮಾಡೋದೇ ಅಭಿನಯ.”



www.careerindia.com

CAREERINDIA



48. "ನೆರವೇ ಗೆಲುವು, ಔಚಿತ್ಯವೇ ಚೆಲುವು."

www.careerindia.com

CAREERINDIA



49. ಈ ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ : 1 × 3 = 3

— ಮನಸಿದ್ದರೆ ಮಾರ್ಗ.

— ಹಾಸಿಗೆ ಇದ್ದಷ್ಟು ಕಾಲು ಚಾಚು.

— ಕೈ ಕೆಸರಾದರೆ ಬಾಯಿ ಮೊಸರು.

www.careerindia.com

ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

— ತೆನಾಲಿ ರಾಮಕೃಷ್ಣ ಹಾಗೂ ಗೌರಿ ಈ ಇಬ್ಬರಲ್ಲಿ ಮೊದಲು ಸತ್ತವರು ಯಾರೆಂದು ತಿಳಿಯಲು ಮಂತ್ರಿಯು ಮಾಡಿದ ಉಪಾಯವೇನು ?

— 'ಮಗುವಿನ ಕರೆ' ಪಾಠದಲ್ಲಿ ಬಾವಿಯ ಪರಿಸರ ಹೇಗೆ ಭಯಾನಕವಾಗಿತ್ತು ?

— ಚಿನ್ನದ ಕೋಲನ್ನು ಬಳಸಿ ರಾಜಕುಮಾರನು ತನ್ನ ತಾಯಿಯನ್ನು ಎಲ್ಲೆಲ್ಲಿ ಹುಡುಕಿದನು ?

50.

www.careerindia.com

CAREERINDIA



51.



www.careerindia.com

CAREERINDIA



52. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಐದು-ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— 'ಮಾನವ ಜನ್ಮ ದೊಡ್ಡದು' ಈ ಕೀರ್ತನೆಯ ಭಾವವನ್ನು ಸಂಗ್ರಹವಾಗಿ ಬರೆಯಿರಿ.

ಅಥವಾ

— ವಚನಕಾರರು ದೇಹವನ್ನು 'ಅಚ್ಚು ಮುರಿದ ಹಾಳು ಬಂಡಿ' ಎಂದು ಕರೆಯಲು ಕಾರಣಗಳಾವುವು ?

www.careerindia.com

CAREERINDIA



53. ನೀನು ಧಾರವಾಡದ ಸಾಧನಕೇರಿಯ ಸರಕಾರಿ ಪ್ರೌಢ ಶಾಲೆಯಲ್ಲಿ ಓದುತ್ತಿರುವ 'ಸುಮನ' ಎಂದು ಭಾವಿಸಿ ಶೈಕ್ಷಣಿಕ ಪ್ರವಾಸಕ್ಕೆ ಹೋಗಲು 500/- ರೂ. ಹಣ ಕಳುಹಿಸಿಕೊಡುವಂತೆ ಬೆಂಗಳೂರಿನ ಗಾಂಧೀನಗರದಲ್ಲಿ ವಾಸಿಸುತ್ತಿರುವ ನಿಮ್ಮ ತಂದೆಯವರಿಗೆ ಒಂದು ಪತ್ರ ಬರೆಯಿರಿ. $1 \times 5 = 5$

ಅಥವಾ

ನೀನು ಸರಕಾರಿ ಪ್ರೌಢ ಶಾಲೆ, ಮಂಡ್ಯದ ಹತ್ತನೆಯ ತರಗತಿಯಲ್ಲಿ ಓದುತ್ತಿರುವ ರಾಧಾ / ವಿನಯ್ ಎಂದು ಭಾವಿಸಿ ಅನಾರೋಗ್ಯದ ಕಾರಣ ನೀಡಿ ಮೂರು ದಿನಗಳ ರಜೆ ಬೇಡಿ ನಿಮ್ಮ ಶಾಲಾ ಮುಖ್ಯೋಪಾಧ್ಯಾಯರಿಗೆ ಪತ್ರ ಬರೆಯಿರಿ.

www.careerindia.com

CAREERINDIA



54. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

- — ವರದಕ್ಷಿಣೆ ಒಂದು ಸಾಮಾಜಿಕ ಸಮಸ್ಯೆ
- — ರಾಷ್ಟ್ರೀಯ ಹಬ್ಬಗಳು
- — ಕ್ರೀಡೆಗಳ ಮಹತ್ವ

www.careerindia.com

www.careerindia.com